## ಮಧ್ಯಂತರ ಅರ್ಜಿ ನಂ. 8 ರ ಮೇಲೆ ಆದೇಶ

1. ಅರ್ಜಿದಾರ/ ಪ್ರತಿವಾದಿ ನಂ. 1, 3, 4 ಮತ್ತು 6 ರವರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –18 ನಿಯಮ– 17 ಜೊತೆಗೆ ಕಲಂ. 151 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಪಿಡಬ್ಲ್ಯೂ–1 ರವರ ಪಾಟೀಸವಾಲಿಗೆ ಅನುಮತಿ ನೀಡಬೇಕೆಂದು ವಿನಂತಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಪಿಡಬ್ಲ್ಯೂ–1 ರವರನ್ನು ಸಂಪೂರ್ಣ ಪಾಟೀಸವಾಲಿಗೆ ಒಳಪಡಿಸಿದ ನಂತರ ತಾನು ಡಿಡಬ್ಲ್ಯೂ–1 ಎಂದು ಸಾಕ್ಷಿ ನುಡಿದು, ಪಾಟೀಸವಾಲಿನಲ್ಲಿ ವಾದಿ ಪರ ಹಲವಾರು ದಾಖಲೆಗಳನ್ನು ಪಿ ನಿಶಾನೆಗೊಳಪಡಿಸಿಕೊಂಡಿದ್ದಿರುತ್ತದೆ. ಡಿಡಬ್ಲ್ಯೂ –1 ರವರ ಪಾಟೀಸವಾಲಿನಲ್ಲಿ ನಿಶಾನೆಗೆ ಒಳಪಟ್ಟ ದಾಖಲೆಯಲ್ಲಿಯ ಸಹಿಗಳನ್ನು ಮಾತ್ರ ಈ ಪ್ರತಿವಾದಿ ಒಪ್ಪಿಕೊಂಡಿದ್ದು, ಅವುಗಳಲ್ಲಿಯ ಸಂಗತಿಗಳನ್ನು ಅಲ್ಲಗಳೆಯುತ್ತಾರೆ. ಸದರಿ ದಾಖಲೆಗಳು ವಾದಿಯ ಬಳಿ ಆತನ ಸಾಕ್ಷಿ ಪ್ರಾರಂಭಿಸುವ ಸಮಯದಲ್ಲಿದ್ದರೂ ಸಹ ಅವುಗಳನ್ನು ಹಾಜರುಪಡಿಸದೇ ಡಿಡಬ್ಲ್ಯೂ –1 ರವರ ಪಾಟೀಸವಾಲಿನಲ್ಲಿ ಹಾಜರುಪಡಿಸಿ ದಾಖಲೆಗಳ ಮೇಲಿನ ಡಿಡಬ್ಲ್ಯೂ –1 ರವರ ಸಹಿ ಇರುತ್ತದೆಂದು ನಿಶಾನೆಗೆ ಒಳಪಡಿಸಿಕೊಂಡಿದ್ದಿರುತ್ತದೆ. ಸದರಿ ದಾಖಲೆಗಳ ಮೂಲ, ವಾದಿಯ ಬಳಿ ಸದರಿ ದಾಖಲೆಗಳು ಹೇಗೆ ಬಂದವೆಂದು ಮತ್ತು ಅವುಗಳನ್ನು ಯಾವ ಕಾರಣಕ್ಕಾಗಿ

ಬರೆದುಕೊಡಲಾಗಿದೆ ಎಂಬುವುದರ ಕುರಿತು ವಾದಿಯನ್ನು ಪುನಃ ಪಾಟೀಸವಾಲಿಗೆ ಒಳಪಡಿಸುವುದು ಅತೀ ಅವಶ್ಯವಿರುತ್ತದೆ. ಸದರಿ ದಾಖಲೆಗಳು ವಾದಿಯ ಬಳಿ ಈ ಮೊದಲೇ ಇದ್ದರೂ ಸಹ ಅವುಗಳ ಮೇಲೆ ಮಾಡುವ ಪಾಟೀಸವಾಲನ್ನು ತಪ್ಪಿಸಿಕೊಳ್ಳಲು ಈ ಮೊದಲು ಹಾಜರುಪಡಿಸಿರುವುದಿಲ್ಲ. ವಾದಿಯು ಸದರಿ ದಾಖಲೆಗಳ ಮೇಲೆ ಪಾಟೀಸವಾಲಿಗೆ ಒಳಪಡದೇ ಅದರ ದುರ್ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಕಾರಣ ಪಿಡಬ್ಲ್ಯೂ –1 ರವರ ಪಾಟೀಸವಾಲಿಗಾಗಿ ಅವಕಾಶ ನೀಡಬೇಕೆಂದು ವಿನಂತಿಸಿರುತ್ತಾರೆ.

**3.** ಸದರಿ ಅರ್ಜಿಗೆ ವಾದಿ ಪರ ತಕರಾರು ಸಲ್ಲಿಸಿ, ಪ್ರಸ್ತುತ ಅರ್ಜಿಯನ್ನು ದಾವೆ ಮುಂದೂಡುವ ದುರುದ್ದೇಶದಿಂದ ಸಲ್ಲಿಸಿರುವುದರಿಂದ ಆರಂಭದಲ್ಲಿಯೇ ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ. ಪ್ರಸ್ತುತ ದಾವೆಯಲ್ಲಿಯ 3 ಮತ್ತು 6 ನೇ ಪ್ರತಿವಾದಿಯರು ಕುಟುಂಬದ ಆದಾಯದ ನಿಜವಾದ ಫಲಾನುಭವಿಗಳಿದ್ದು , ವಾದಿಗೆ ಸಂಬಂಧಿಸಿದ ಸ್ವಯಾರ್ಜಿತ ಆಸ್ತಿಯ ಹಕ್ಕನ್ನು ತೆಗೆದುಹಾಕಬೇಕೆಂಬುವ ಉದ್ದೇಶದಿಂದ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

4. ಸದರಿ ದಾಖಲೆಗಳ ಕುರಿತಾಗಿ 3 ನೇ ಪ್ರತಿವಾದಿಯ ತಾಯಿಯಾದ 1 ನೇ ಪ್ರತಿವಾದಿ ಮಹತ್ವದ ಸಾಕ್ಷಿ ಇದ್ದರೂ ಸಹ ಅವಳನ್ನಾಗಲೀ ಅಥವಾ ಸದರಿ ಬಾಡಿಗೆ ಹಣವನ್ನು ಯಾರು ಪಡೆಯುತ್ತಿದ್ದಾರೆ ಎಂಬುವ ಕುರಿತಾಗಿ ಬಾಡಿಗೆದಾರರಾದ 7

ಮತ್ತು 9 ನೇ ಪ್ರತಿವಾದಿಯರ ಸಾಕ್ಷ್ಯವನ್ನಾಗಲೀ ಪ್ರಸ್ತುತ ಪ್ರತಿವಾದಿ ಮಾಡಿಸದೇ ಕೇವಲ ಪಿಡಬ್ಲ್ಯೂ-1 ರವರನ್ನು ಪುನಃ ಪಾಟೀಸವಾಲಿಗೆ ಕರೆಸಿ ನ್ಯಾಯಾಲಯದ ಅಮೂಲ್ಯ ಸಮಯವನ್ನು ಹಾಳುಮಾಡುವ ಉದ್ದೇಶವನ್ನು ಹೊಂದಿರುತ್ತಾರೆ.

5. 1 ನೇ ಪ್ರತಿವಾದಿಯು ತಾಯಿ ಇದ್ದು, ಅವಳನ್ನು ನ್ಯಾಯಾಲಯಕ್ಕೆ ಸಾಕ್ಷಿ ಎಂದು ಕರೆದರೆ ಕುಟುಂಬದ ಆಸ್ತಿ ಹಾಗೂ ಉತ್ಪನ್ನದ ವಿಚಾರವಾಗಿ ಎಲ್ಲವೂ ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ 3 ಮತ್ತು 6 ನೇ ಪ್ರತಿವಾದಿಯರು ಅದಕ್ಕೆ ಆಸ್ಪದ ನೀಡುತ್ತಿಲ್ಲ. ಡಿಡಬ್ಲ್ಯೂ -1 ರವರ ಪಾಟೀಸವಾಲಿನಲ್ಲಿ ವಾದಿ ಪರ ಹಾಜರುಪಡಿಸಿದ ದಾಖಲೆಗಳು ಹಾಗೂ ಉಳಿದ ದಾಖಲಾತಿಗಳು ಕುಟುಂಬಕ್ಕೆ ಸಂಬಂಧಿಸಿದ ದಾಖಲೆಗಳೆಂದು ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ 3 ನೇ ಪ್ರತಿವಾದಿ ಈ ಮೊದಲು ಬಚ್ಚಿಟ್ಟಿದ್ದಿರುತ್ತದೆ. ಸದರಿ ದಾಖಲೆಗಳು ಯಾರ ಕಬ್ಜೆಯಲ್ಲಿದ್ದವು ಎಂಬುವುದರ ಕುರಿತು ತಾಯಿಯಾದ 1 ನೇ ಪ್ರತಿವಾದಿಯನ್ನು ಸಾಕ್ಷಿ ಎಂದು ಕರೆದರೆ ಸ್ಪಷ್ಟವಾಗಿ ಕಂಡುಬರುತ್ತದೆ. ಕಾರಣ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ .

6. ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ..........

.

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು 1, 3, 4 ಮತ್ತು 6 ನೇ ಪ್ರತಿವಾದಿಯರು ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

7. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ನಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

8. **ಅಂಶ ನಂ.1**:- ದಾವಾಸ್ತಿಯಲ್ಲಿ ಪಾಲುವಾಟ್ನೆ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಡಿಡಬ್ಲ್ಯೂ-1 ರವರ ಸಾಕ್ಷಿ ಪೂರ್ಣಗೊಂಡು ಪ್ರತಿವಾದಿಯರ ಪರ ಮುಂದುವರೆದ ಸಾಕ್ಷಿಗಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಲಾಗಿದೆ. ಡಿಡಬ್ಲ್ಯೂ-1 ರವರ ಪಾಟೀಸವಾಲಿನಲ್ಲಿ ದಾವಾಸ್ತಿಗಳಿಗೆ ಸಂಬಂಧಿಸಿದಂತೆ 7 ರಿಂದ 9 ನೇ ಪ್ರತಿವಾದಿಯರು ನೀಡುವ ಬಾಡಿಗೆ ಹಣವನ್ನು ಯಾರು ಪಡೆದುಕೊಳ್ಳುತ್ತಾರೆ ಎಂಬುವುದನ್ನು ಸಾಬೀತುಪಡಿಸಲು ವಾದಿ ಪರ ವಕೀಲರು ಸುದೀರ್ಘವಾಗಿ ಪಾಟೀಸವಾಲಿಗೆ ಒಳಪಡಿಸಿ ಬಾಡಿಗೆ ಕರಾರು ಪತ್ರಗಳು ಹಾಗೂ ಇತರ ದಾಖಲೆಗಳನ್ನು ತೋರಿಸಿದಾಗ ಅವುಗಳಲ್ಲಿರುವ ಸಹಿಗಳನ್ನು

ಡಿಡಬ್ಲ್ಯೂ-1 ರವರು ಒಪ್ಪಿಕೊಂಡ ನಂತರ ಸದರಿ ದಾಖಲೆಗಳನ್ನು ವಾದಿ ಪರ ನಿಶಾನೆಗೆ ಒಳಪಡಿಸಿಕೊಂಡಿರುತ್ತಾರೆ.

**9.** ಸದರಿ ದಾಖಲೆಗಳಿಗೆ ಡಿಡಬ್ಲ್ಯೂ-1 ರವರು ತನ್ನ ಸಹಿ ಇರುತ್ತದೆಂದು ಸಾಕ್ಷಿ ನುಡಿದಿರುವುದರಿಂದ ಭಾರತ ಸಾಕ್ಷ್ಯ ಅಧಿನಿಯಮ ಕಲಂ. 145 ರಡಿಯಲ್ಲಿ ದಾಖಲೆಗಳನ್ನು ಪಾಟೀಸವಾಲಿನಲ್ಲಿ ವಾದಿ ಪರ ಹಾಜರುಪಡಿಸಲು ಅವಕಾಶ ನೀಡಿದ್ದು ಇರುತ್ತದೆ. ಸದರಿ ದಾಖಲೆಗಳಲ್ಲಿ ಸಹಿ ಮಾತ್ರ ಡಿಡಬ್ಲ್ಯೂ-1 ರವರದ್ದಿದ್ದು, ಉಳಿದಂತೆ ಅದರಲ್ಲಿರುವ ಸಂಗತಿಯನ್ನು ಒಪ್ಪಿಕ್ಕೊಳ್ಳುವುದಿಲ್ಲ, ಕಾರಣ ಈ ಕುರಿತಾಗಿ ಪಿಡಬ್ಲ್ಯೂ-1 ರವರನ್ನು ಪಾಟೀಸವಾಲಿಗೆ ಒಳಪಡಿಸುವುದು ಅವಶ್ಯವಿರುತ್ತದೆಂದು ಅರ್ಜಿಯಲ್ಲಿ ವಿನಂತಿಸಿರುತ್ತಾರೆ. ಕೇವಲ ದಾಖಲೆಗಳಲ್ಲಿರುವ ಸಹಿಯನ್ನು ಒಪ್ಪಿಕೊಂಡ ಮಾತ್ರಕ್ಕೆ ಅದರಲ್ಲಿರುವ ಸಂಗತಿ ಕುರಿತಾಗಿ ಪೂರಕವಾಗಿ ಸಾಕ್ಷ್ಯಾಧಾರ ಇರದೇ ದಾಖಲೆಗಳಲ್ಲಿನ ವಿಷಯ ಸರಿ ಇರುತ್ತದೆ ಎಂದು ಒಪ್ಪಲಾಗದು. ಕಾರಣ ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –18 ನಿಯಮ –17 ರಡಿಯಲ್ಲಿ ತಿಳಿಸಿದಂತೆ ಸದರಿ ಸಂಗತಿಯ ಕುರಿತಾಗಿ ಪ್ರತಿವಾದಿ ಪಿಡಬ್ಲ್ಯೂ-1 ರವರನ್ನು ಪಾಟೀಸವಾಲಿಗೆ ಒಳಪಡಿಸಲು ಪುನಃ ಪಿಡಬ್ಲ್ಯೂ –1 ರವರ ಸಾಕ್ಷಿಯನ್ನು ಪ್ರಾರಂಭಿಸಲು ಯಾವುದೇ ಪೂರಕವಾದ ಸಂಗತಿ ಡಿಡಬ್ಲ್ಯೂ –1 ರವರ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಕಂಡುಬರುವುದಿಲ್ಲವೆಂದು ಪರಿಗಣಿಸಿ ಅಂಶ ನಂ. 1 ಕ್ಕೆ " **ನಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

10. **<u>ಅಂಶ ನಂ. 2</u>**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**<u>ಆದೇಶ</u>**

ಮಧ್ಯಂತರ ಅರ್ಜಿ ನಂ. 8 ನ್ನು ರೂ. 100/- ಖರ್ಚಿನ ಮೇರೆಗೆ ವಜಾಗೊಳಿಸಲಾಗಿದೆ.

ಪ್ರತಿವಾದಿಯರ ಪರ ಮುಂದುವರಿದ ಸಾಕ್ಷಿಗಾಗಿ ಪ್ರಕರಣವನ್ನು ದಿಃ 4-12-2023 ರಂದು ಕರೆಯಿರಿ .

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**